ಅಧ್ಯಕ್ಷರು : ಆಗಬಹುದೇ ಮಾನ್ಯ ಖರ್ಗೆಯವರೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನಗೇನೂ ಅವರ ಉತ್ತರ ಬೇಕಾಗಿಲ್ಲ. ನನಗೆ ಕೆರೆಗಳನ್ನು ದುರಸ್ತಿ ಮಾಡಿಸಿ ಕೊಟ್ಟರೆ ಸಾಕಾಗುತ್ತದೆ. ಅವರು ಬೇಕಾದರೆ ಆಸಕ್ತಿ ವಹಿಸಿ ಮಾಡಿಸಲಿ.

ಅಧ್ಯಕ್ಷರು : ನಾವು ಚಿಕಿತ್ಸೆ ಮಾಡುತ್ತೇವೆ ಎಂದು ಅವರು ಹೇಳಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಅವರಿಗೆ ಮನವಿ ಮಾಡಿಕೊಳ್ಳುವುದೇನೆದರೆ, ಅವರು ದಯಮಾಡಿ ದೆಹಲಿಗೆ ಹೋಗುವ ಮುಂಚೆ ಈ ಕೆಲಸವನ್ನು ನಮಗೆ ಮಾಡಿಕೊಡಲಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾನು ಮಾನ್ಯ ಸದಸ್ಯರಿಗೆ ಭರವಸೆ ಕೊಡಬಯಸುತ್ತೇನೆ. ನಾನು ರಾಜ್ಯದಲ್ಲಿರತಕ್ಕ ಎಲ್ಲಾ ಕೆರೆಗಳನ್ನು ರಿಪೇರಿ ಮಾಡಿಸಿ, ಅದರ ಬಗ್ಗೆ ಒಂದು ವರದಿ ಕೊಟ್ಟೇ ದೆಹಲಿಗೆ ಹೋಗುತ್ತೇನೆ.

ಅಧ್ಯಕ್ಷರು : ಆಯಿತು ಬಿಡಿ.

ಅಂಗನವಾಡಿಗಳನ್ನು ತೆರೆಯಲು ಆಳವಡಿಸಿರುವ ಸೂತ್ರಗಳು

63 - ಡಾ. ಎಂ.ಪಿ. ಕರ್ಕಿ (ಕುಮಟ) : ಮಾನ್ಯ ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಂಗನವಾಡಿಗಳನ್ನು ಪ್ರಾರಂಭಿಸಲು ಆಳವಡಿಸಿರುವ ಸೂರ್ತಗಳಾವುವು, (ಜನ ಸಂಖ್ಯೆಯೆ; ಜನಸಾಂದ್ರತೆಯೆ. ಕ್ಷೇತ್ರ ವಿಸ್ತಾರವೇ),*

ಆ) *ಮಲೆನಾಡಿನ ಪ್ರದೇಶಗಳಲ್ಲಿ ಈ ಸೂತ್ರ ಸಡಿಲಿಸಿ ಹೆಚ್ಚು ಅಂಗನವಾಡಿಗಳನ್ನು ತೆರೆಯಲು ಅವಕಾಶ ಕಲ್ಪಿಸಲಾಗುವುದು?*

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ರಾಜ್ಯ ಸಚಿವರು)

ಅ) ಕೇಂದ್ರ ಸರ್ಕಾರದ ಸೂಚನೆಯಂತೆ ಐಸಿಡಿಎಸ್ ಯೋಜನೆ ಪ್ರಾರಂಭ ಮಾಡಲು ಗುಡ್ಡಗಾಡು ಜನರು ಅಥವಾ ಹರಿಜನರು ಹೆಚ್ಚಾಗಿ ವಾಸಿಸುವ ಪ್ರದೇಶಗಳು, ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳು, ಕ್ಷಾಮ ಪೀಡಿತ ಪ್ರದೇಶಗಳು ಮತ್ತು ಅಪೌಷ್ಟಕತೆ ಹೆಚ್ಚಾಗಿ ಇರುವ ಮತ್ತು ಸಮಾಜ ಸೇವಾ ಅಭಿವೃದ್ಧಿಯಲ್ಲಿ ಹಿಂದುಳಿದ ತಾಲ್ಲೂಕುಗಳಿಗೆ ಆದ್ಯತೆ ನೀಡಿ ಆಯ್ಕೆ ಮಾಡಲಾಗುತ್ತದೆ. ಇಂತಹ ಪ್ರದೇಶಗಳಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ಒಂದು ಅಂಗನವಾಡಿಯನ್ನು ತೆರೆಯಲಾಗುತ್ತದೆ.

ಆ) ಗುಡ್ಡಗಾಡು ಮತ್ತು ಮರಳುಗಾಡು ಪ್ರದೇಶಗಳಲ್ಲಿ ಜನಸಂಖ್ಯೆ ವಿರಳವಾಗಿರುವುದರಿಂದ ಹಳ್ಳಿಗಳು ಸಣ್ಣದಾಗಿರುತ್ತವೆ. ಕೇಂದ್ರ ಸರ್ಕಾರದ ಸೂಚನೆಯಂತೆ ಇಂತಹ ಪ್ರದೇಶಗಳಲ್ಲಿ300ಅಥವಾ ಜಾಸ್ತಿ ಜನಸಂಖ್ಯೆ ಇರುವ ಪ್ರತಿಯೊಂದು ಸಣ್ಣ ಹಳ್ಳಿಗಳಲ್ಲಿ, ಹ್ಯಾಮ್ಲೆಟ್‌ಗಳಲ್ಲಿ ಅಂಗನವಾಡಿಗಳನ್ನು

ತೆರೆಯಲಾಗಿರುತ್ತದೆ. ಇದಲ್ಲದೇ ಮನೆಗಳು ದೂರವಿದ್ದು 6 ವರ್ಷದ ಮಕ್ಕಳು, ಗರ್ಭಿಣಿಯರು ಮತ್ತು ಬಾಣಂತಿಯರು ಅಂಗನವಾಡಿ ಕೇಂದ್ರಕ್ಕೆ ಬರುವುದು ಸಾಧ್ಯವಿಲ್ಲದಾಗ ಹೆಚ್ಚುವರಿ ಸಹಾಯಕಿಯನ್ನು ನೇಮಿಸಿಕೊಂಡು ಅವರ ಮನೆಗಳಿಗೆ ಆಹಾರವನ್ನು ತಲುಪಿಸುವ ವ್ಯವಸ್ಥೆ ಇರುತ್ತದೆ.

ಡಾ।। ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ಮಲೆನಾಡು ಪ್ರದೇಶಗಳಲ್ಲಿ, ಗುಡ್ಡಗಾಡು ಮತ್ತು ಮರಳುಗಾಡು ಪ್ರದೇಶಗಳಲ್ಲಿ ವಿರಳವಾಗಿ ಹಳ್ಳಿಗಳ ಸಮುದಾಯ ಇರುವ ಕಡೆಗಳಲ್ಲಿ 300 ಜನಸಂಖ್ಯೆ ಇರತಕ್ಕ ಹಳ್ಳಿಗಳಲ್ಲಿ ಕೂಡ ಅಂಗನವಾಡಿಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ತಿಳಿಸಿದ್ದಾರೆ. ನಮ್ಮ ಉತ್ತರ ಕನ್ನಡ ಜಿಲ್ಲೆ ಅರಣ್ಯ ಜಿಲ್ಲೆಯಾಗಿದೆ. ನಮ್ಮ ಜಿಲ್ಲೆಯಲ್ಲೂ ರೀತಿಯಾದಂತಹ ಮಾನದಂಡವನ್ನು ಉಪಯೋಗಿಸಿ, 300 ಜನಸಂಖ್ಯೆ ಇರತಕ್ಕ ಹಳ್ಳಿಗಳಲ್ಲೂ ಕೂಡ ಅಂಗನರಾಡಿ ಕೇಂದ್ರಗಳನ್ನು ತೆರೆಯುವುದಕ್ಕೆ ಯೋಚಿಸುತ್ತೀರೋ ಅಥವಾ ಈ ರೀತಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೀರೋ

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕರ್ಕಿಯವರು ಹೇಳಿದ ಹಾಗೆ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭ ಮಾಡವುದಕ್ಕೆ ಕನಿಷ್ಟ ಪಕ್ಷ ಒಂದು ಸಾವಿರ ಜನಸಂಖ್ಯೆ ಇರಬೇಕು. ಆದರೆ ಗುಡ್ಡಗಾಡು ಪ್ರದೇಶಗಳಲ್ಲಿ ಬಹಳ ತಾಂಡಗಳು ಇರುತ್ತವೆ, ಇಂಟೀರಿಯರ್ ಆಗಿರುವಂತಹ ಹಳ್ಳಿಗಳನ್ನು300ಜನಸಂಖ್ಯೆ ಇರತಕ್ಕ ಗುಡ್ಡಗಾಡು ಪ್ರದೇಶಗಳಲ್ಲಿಯೂ. ಕೂಡ ಅಂಗನವಾಡಿಗಳನ್ನು ಪ್ರಾರಂಭ ಮಾಡುತ್ತೇವೆ. ಅಂತಹ ಕಡೆ ಪ್ರಾರಂಭ ಮಾಡಿದಾಗ ನಾವು ಇವತ್ತು ಏನೊಂದು ನ್ಯೂಟ್ರಿಷನ್ ಅವರಿಗೆ ಕೊಡಬೇಕಾಗಿದೆ, ಅದನ್ನು ಕೆಲವು ಬಾರಿ ಮನೆಗಳಿಗೇ ಹೋಗಿ ಕೊಡತಕ್ಕ ವ್ಯವಸ್ಥೆ ಕೂಡ ಮಾಡುವುದಕ್ಕೆ ಪ್ರಾವಿಷನ್ ಇದೆ. ಅದನ್ನು ನಾವು ಮಾಡಿ ಕೊಡುತ್ತೇವೆ.

ಡಾ ಎಂ.ಪಿ. ಕರ್ಕಿ : ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡುತ್ತೀರೋ ಹೇಗೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಖಂಡಿತವಾಗಿಯೂ ನಾನು ಅದನ್ನು ಮಾಡಿಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಕ್ಕಳು ಮತ್ತು ಗರ್ಭಿಣಿ ಸ್ತ್ರೀಯರಿಗೆ ಸ್ಕೀಮ್ನಲ್ಲಿ ಸಪ್ಲೈ ಮಾಡುತ್ತಿರುವ ಆಹಾರ ಪದಾರ್ಥಗಳು ಕಳಪೆ ಮತ್ತು ವಿಷಪೂರಿತವಾಗಿದೆ ಮತ್ತು ಇದರಲ್ಲಿ ಹಣದ ದುರುಪಯೋಗವಾಗಿರುವುದನ್ನು ಮೈಸೂರು ಜಿಲ್ಲೆ ಮತ್ತು ರಾಜ್ಯ ಇತರ ಕೆಲವು ಕಡೆಗಳಲ್ಲಿ ಇಲಾಖೆಯ ಅಧಿಕಾರಿಗಳೇ ಕಂಡು ಹಿಡಿದಿದ್ದಾರೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇಂತಹ ಅಧಿಕಾರಿಗಳ ವಿರುದ್ಧ, ಕಳಪೆ ಆಹಾರ ಪದಾರ್ಥಗಳನ್ನು ಸಪ್ಲೈ ಮಾಡುತ್ತಿರುವವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಅಂತಹ ಒಂದು ಆಹಾರ ಪದಾರ್ಥಗಳನ್ನು ಬದಲಾವಣೆ ಮಾಡುವಂತಹ ಕೆಲಸ ಏನಾದರೂ ಸರ್ಕಾರದಿಂದ ನಡೆದಿದೆಯೇ? ಎಂಬುದನ್ನು ಮಾನ್ಯ ಸಚಿವರು ದಯವಿಟ್ಟು ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಪತ್ರಿಕೆಯಲ್ಲಿ ಈ ರೀತಿಯ ಒಂದು ವರದಿ ಬಂದ ತಕ್ಷಣ ಈಗಾಗಲೇ ನಮ್ಮ ಇಲಾಖೆಯವರು ಎಂಟು ದಿವಸಗಳ ಹಿಂದೆ ನಡೆದಿರತಕ್ಕಂತಹುಗಳ ಬಗ್ಗೆ ವಿವರ ಸಂಗ್ರಹಿಸಿದ್ದಾರೆ ಮತ್ತು ಅಲ್ಲಿರತಕ್ಕ ಕಳಪೆ ಪದಾರ್ಥಗಳ ಸ್ಯಾಂಪಲ್ ತೆಗೆದುಕೊಂಡು

ಅವುಗಳನ್ನು ಪರೀಕ್ಷೆಗಾಗಿ ಲ್ಯಾಬ್‌ಗೆ ಕಳುಹಿಸಿದ್ದಾರೆ. ಎರಡು ಜಿಲ್ಲೆಗಳಲ್ಲೂ ಈಗಾಗಲೇ ಕೊಡತಕ್ಕಂತಹ ಪದಾರ್ಥಗಳನ್ನು ನಿಲ್ಲಿಸಿ ಬೇರೆ ವ್ಯವಸ್ಥೆ ಮಾಡಬೇಕೆಂದು ನಿನ್ನೆ ಆದೇಶ ಕೊಟ್ಟಿದ್ದೇವೆ. ಅದೆಲ್ಲಾ ಸ್ಯಾಂಪಲ್ ತರಿಸಿ ಅದರಲ್ಲಿರತಕ್ಕಂತಹ ನ್ಯೂನತೆ ಕಂಡು ಹಿಡಿದು ಇದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ.

ಡಾ॥ ಯು. ಚಿತ್ತರಂಜನ್ : ಮಾನ್ಯ ಅಧ್ಯಕ್ಷರೇ, ಅಂಗನವಾಡಿ ಕಾರ್ಯಕರ್ತರ ಹುದ್ದೆಗಳು ಖಾಲಿಯಾದಾಗ ಪುನರ್ ನೇಮಕ ಮಾಡುವುದಕ್ಕೆ ಬಹಳ ವಿಳಂಬವಾಗುತ್ತಿದೆ. ಹೆಚ್ಚಿಗೆ ಮದುವೆ ವಯಸ್ಸಿಗೆ ಬಂದಂತಹ ಮಹಿಳೆಯರು ಇರುತ್ತಾರೆ. ಅವರು ಮದುವೆ ಮಾಡಿದ ತಕ್ಷಣ ಬೇರೆ ಕಡೆ ಹೋಗುತ್ತಾರೆ. ಅದಕ್ಕಾಗಿ ನಾನು ಮಂತ್ರಿಗಳಲ್ಲಿ ಆಶ್ವಾಸನೆ ಪಡೆದುಕೊಳ್ಳುವುದಕ್ಕೆ ಇಚ್ಛೆ ಪಡುವುದೇನೆಂದರೆ ಅವರನ್ನು ಸೆಲೆಕ್ಟ್ ಮಾಡತಕ್ಕಂತಹ ಪ್ರೊಸೆಸನ್ನು ಸಿಂಪ್ಲಿಫೈ ಮಾಡಿ, ಎಲ್ಲಿ ಖಾಲಿ ಹುದ್ದೆ ಇರುತ್ತವೆ ಅವನ್ನು ತಕ್ಷಣ ನೇಮಕ ಮಾಡುವ ಹಾಗೆ ತಾವು ಆದೇಶಗಳನ್ನು ಹೊರಡಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಈಗಾಗಲೇ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲೂ ಮಾಡುತ್ತಿದ್ದೇವೆ, ಕೆಲವು ಸಾರಿ ಬಹಳ ಹಳ್ಳಿಗಳಲ್ಲಿ, ಯಾವ ಹಳ್ಳಿಯಲ್ಲಿ ಒಬ್ಬ ಹೆಣ್ಣು ಮಗಳು ಇದ್ದಾಳೆ ಅದೇ ಹಳ್ಳಿಯಲ್ಲಿರತಕ್ಕಂತಹ ಹೆಣ್ಣು ಮಗಳಿಗೆ ಕೆಲಸ ಕೊಡಬೇಕೆಂದು ನಿರ್ದಿಷ್ಟವಾಗಿ ಕರಾರು ಹಾಕಿದ್ದೇವೆ. ಕೆಲವು ಸಾರಿ ಬೇರೆ ಕಡೆಯಿಂದ ತೆಗೆದುಕೊಳ್ಳಬೇಂಕೆಂದು ಹೇಳಿದಾಗ ಕಷ್ಟ ಆಗುತ್ತದೆ. ಸಾಧ್ಯವಾದಷ್ಟು ಅದೇ ಹಳ್ಳಿಯಲ್ಲಿರತಕ್ಕಂತಹ ಹೆಣ್ಣು ಮಗಳಿಗೆ ಕೆಲಸ ದೊರಕಿಸುವಂತಹ ವ್ಯವಸ್ಥೆ ಮಾಡುತ್ತಿದ್ದೇವೆ. ಈಗಾಗಲೇ ಖಾಲಿ ಇರತಕ್ಕಂತಹ ಸುಮಾರು ಹುದ್ದೆಗಳನ್ನು ತಂಬುತ್ತಿದ್ದೇವೆ. ಇನ್ನು ಒಂದೆರಡು ತಿಂಗಳಲ್ಲಿ ಸಂಪೂರ್ಣವಾಗಿ ಎಲ್ಲಾ ಅಂಗನವಾಡಿ ಕಾರ್ಯಕರ್ತರ ಹುದ್ದೆಗಳನ್ನು ತುಂಬುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕ್ಷೇತ್ರದಲ್ಲಿ ಈ ಅಂಗನವಾಡಿ ಉಪಾಧ್ಯಾಯರ ಇಂಟರ್‌ವ್ಯೂ ನಡೆಯಿತು, ಸುಮಾರು ಒಂದೂವರೆ ಎರಡು ತಿಂಗಳಾಯಿತು ಅದು ಸೆಲೆಕ್ಷನ್ ಆಗಿಯೂ ಕೂಡ ಖಾಲಿ ಇರುವುದಕ್ಕೆ ಕಾರಣ ಏನು ಎಂದು ದಯಮಾಡಿ ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಿವಪ್ಪನವರು ನಿರ್ದಿಷ್ಟವಾಗಿ ಅವರ ಕ್ಷೇತ್ರದಲ್ಲಿ ಯಾವ ಹಳ್ಳಿಯಲ್ಲಿ ಯಾವ ಹುದ್ದೆ ಭರ್ತಿ ಮಾಡಿಲ್ಲ ಎಂದು ನನಗೆ ತಿಳಿಸಿದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಹೇಮಾವತಿ ಯೋಜನೆಯಡಿಯಲ್ಲಿ ನಾನಾ ಕಾಮಗಾರಿಗಳಿಗೆ ಖರ್ಚಾಗಿರುವ ಹಣ

64 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೇಮಾವತಿ ಯೋಜನೆಯಲ್ಲಿ ತುಮಕೂರು-ಕುಣಿಗಲ್ ಮಧ್ಯ 125 ಕಿ.ಮೀ. ನಂತರದ ನಾಲಾ ಕಾಮಗಾರಿಗಳಿಗೆ ಈಗಾಗಲೇ ಖರ್ಚಾಗಿರುವ ಹಣವೆಷ್ಟು?